ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 8–5–2015

## ಪತ್ರಿಕಾ ಆಮಂತ್ರಣ

| | | | |
|---|---|---|---|
| 1. | ಕರ್ನಾಟಕ ರಾಜ್ಯ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ.<br><br>ಉಪಸ್ಥಿತಿ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br><br>ಶ್ರೀ ಕೆ. ಜೆ. ಜಾರ್ಜ್,<br>ಗೃಹ ಸಚಿವರು. | **9-5-2015**<br>ಶನಿವಾರ<br>ಬೆಳಿಗ್ಗೆ<br>9–15 ಗಂಟೆಗೆ | 7ನೇ ಮಹಡಿ,<br>ಸಮ್ಮೇಳನ ಸಭಾಂಗಣ,<br>ಪೊಲೀಸ್ ಪ್ರಧಾನ ಕಚೇರಿ,<br>ಬೆಂಗಳೂರು. |
| 2. | "ರಂಗ ರುಚಿ" ಮಕ್ಕಳ ಬೇಸಿಗೆ ರಜೆ ಶಿಬಿರದ ಸಮಾರೋಪ ಸಮಾರಂಭ.<br><br>ಮುಖ್ಯ ಅತಿಥಿಗಳು:<br><br>ಶ್ರೀಮತಿ ತಾರಾ ಅನುರಾಧ<br>ಖ್ಯಾತ ಚಲನಚಿತ್ರ ನಟಿ ಹಾಗೂ ವಿಧಾನ ಪರಿಷತ್ ಸದಸ್ಯರು.<br><br>ಶ್ರೀಮತಿ ಗೀತಾ ರಾಮಾನುಜಮ್,<br>ಸಂಸ್ಥಾಪಕರು,<br>ಕತಾಲಯ, | **10-5-2015**<br>ಭಾನುವಾರ<br>ಸಂಜೆ<br>4–00 ಗಂಟೆಗೆ | ಬಾಲ ಭವನ ರಂಗಮಂದಿರ,<br>ಕಬ್ಬನ್ ಉದ್ಯಾನವನ,<br>ಬೆಂಗಳೂರು – 560 001. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಆಕ್ಷೇಪಣೆಗೆ ಆಹ್ವಾನ

ಬೆಂಗಳೂರು, ಮೇ 8 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕ ಸೇವಾ ಆಯೋಗವು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿನ ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಮೇ 6 ರಂದು ಆಯೋಗದ ಅಂತರ್ಜಾಲ "http:kpsc.kar.nic.in" ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ. ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳೂ ಈ ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದಾಗಿದೆ. ಮೇ 20 ರ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕ ಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

# ಗಾಂಧೀ ಮೊದಲ ಹೆಜ್ಜೆ : ಜಾಥಾ ಉದ್ಘಾಟನೆ

ಬೆಂಗಳೂರು, ಮೇ 8 (ಕರ್ನಾಟಕ ವಾರ್ತೆ)

ಕರ್ನಾಟಕದಲ್ಲಿ ಗಾಂಧೀ ಮೊದಲ ಹೆಜ್ಜೆ ಶತಮನೋತ್ಸವ ಆಚರಣೆಯ ಅಂಗವಾಗಿ ಹಿರಿಯ ಗಾಂಧೀವಾದಿಗಳು, ವಿದ್ಯಾರ್ಥಿಗಳು, ಪ್ರತಿಷ್ಠಾನದ ಪದಾಧಿಕಾರಿಗಳು, ನಗರದ ರೈಲ್ವೆ ನಿಲ್ದಾಣದಿಂದ ಗಾಂಧೀ ಭವನದವರೆಗೆ ಇಂದು ಪಾದಯಾತ್ರೆ ನಡೆಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಯುವಜನ ಸಬಲೀಕರಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಸೇವಾ ಯೊಜನೆ, ಗಾಂಧಿ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಗಾಂಧೀ ಶಾಂತಿ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ಕರ್ನಾಟಕದಲ್ಲಿ ಗಾಂಧೀ ಮೊದಲ ಹೆಜ್ಜೆ ಶತಮಾನೋತ್ಸವ ಹಮ್ಮಿಕೊಳ್ಳಲಾಗಿತ್ತು.

ಪಾದಯಾತ್ರೆಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಚಾಲನೆ ನೀಡಿದರು. ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಂ.ಆರ್. ರಂಗಶಾಮಯ್ಯ , ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ ವೂಡೆ.ಪಿ.ಕೃಷ್ಣ, ದೆಹಲಿಯ ಮಹಾತ್ಮಾ ಗಾಂಧಿ ನ್ಯಾಷನಲ್ ಮ್ಯೂಸಿಯಮ್ ನಿರ್ದೇಶಕ ಅಣ್ಣಾಮಲೈ, ವಾರ್ತಾ ಇಲಾಖೆ ನಿರ್ದೇಶಕ ಎನ್. ಆರ್. ವಿಶುಕುಮಾರ್, ಬೆಂಗಳೂರು ವಿಶ್ವವಿದ್ಯಾಲಯದ ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ನಾಗರಾಜ ಹುಳಿಯಾರ್, ಗಾಂಧೀ ಪ್ರತಿಷ್ಠಾನದ ಪದಾಧಿಕಾರಿಗಳು, ವಿದ್ಯಾರ್ಥಿಗಳು ಪಾದಯಾತ್ರೆಯಲ್ಲಿ ಪಾಲ್ಗೊಂಡಿದರು.

ನೈತಿಕ ಜೀವನವೇ ಧಾರ್ಮಿಕ ಜೀವನ, , ದೇವರನ್ನುಳಿದು ನಮಗೆ ಅಸ್ಥಿತ್ವವೇ ಇಲ್ಲ. ಸಹನೆಯ ಕಾಲ ಅತ್ಯಂತ ಮಧುರೆ, ಸತ್ಯದ ಮಾರ್ಗದಿಂದ ನಾವು ಜಗತ್ತನ್ನೇ ಪರಿವರ್ತಿಸಬಹುದು ಎಂಬ ಗಾಂಧೀಜಿಯವರ ಹೇಳಿಯನ್ನೊಳಗೊಂಡ ಫಲಕಗಳನ್ನು ಹಿಡಿದು ಹಿರಿಯ ವಿದ್ಯಾರ್ಥಿಗಳು ರಸ್ತೆಯಲ್ಲಿ ಸಾಗಿದರು.

<u>ಗಾಂಧೀಜಿ ಛಾಯಾಚಿತ್ರ ಪ್ರದರ್ಶನ:</u>

ಕಾರ್ಯಕ್ರಮದ ಅಂಗವಾಗಿ ಗಾಂಧೀಜಿಯವರ ಜೀನವನ್ನು ಬಿಂಬಿಸುವ ಛಾಯಾಚಿತ್ರ ಪ್ರದರ್ಶನವನ್ನು ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ, ಬೆಳಗಾವಿ ಕಾಂಗ್ರೆಸ್ ಅಧಿವೇಶನ, ಗುಜರಾತಿನ ಉಪ್ಪಿನ ಸತ್ಯಾಗ್ರಹ, ರವೀಂದ್ರನಾಥ ಠಾಗೂರ್ ಜೊತೆಗಿನ ಗಾಂಧೀಜಿಯವರ ಛಾಯಾಚಿತ್ರಗಳು ನೋಡುಗರನ್ನು ಆಕರ್ಷಿಸಿದವು.

ಬಾಬು:ಜಿಪಿಆರ್.

# ಜಿಲ್ಲೆಗೊಂದು ಗಾಂಧೀ ಭವನ ನಿರ್ಮಾಣ

– ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು, ಮೇ 8 (ಕರ್ನಾಟಕ ವಾರ್ತೆ)**

ಮುಂದಿನ ದಿನಗಳಲ್ಲಿ ಸರ್ಕಾರದ ವತಿಯಿಂದ ಜಿಲ್ಲೆಗೊಂದು ಗಾಂಧೀ ಭವನ ನಿರ್ಮಾಣ ಮಾಡಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಶ್ವಾಸನೆ ನೀಡಿದರು.

ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ "ಕರ್ನಾಟಕದಲ್ಲಿ ಗಾಂಧೀ ಮೊದಲ ಹೆಜ್ಜೆ ಶತಮಾನೋತ್ಸವವನ್ನು" ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಗಾಂಧೀಜಿ ಅವರು ಯುವಕರಿಗೆ ಸ್ಫೂರ್ತಿ ಹಾಗೂ ಪ್ರೇರಣೆದಾತರಾಗಿರುವ ಹಿನ್ನೆಲೆಯಲ್ಲಿ ಗಾಂಧೀ ವಿಚಾರಧಾರೆಗಳನ್ನು ಯುವಕರಿಗೆ ತಲುಪಿಸುವ ಉದ್ದೇಶದಿಂದ ಡಾ. ಹೋ ಶ್ರೀನಿವಾಸಯ್ಯ ಅವರ ಬೇಡಿಕೆಯಂತೆ ಜಿಲ್ಲೆಗೊಂದು ಗಾಂಧೀ ಭವನ ಸ್ಥಾಪಿಸುವುದಾಗಿ ತಿಳಿಸಿದ ಅವರು ಉತ್ತಮ ಸಮಾಜದ ಸ್ಥಾಪನೆಗಾಗಿ ಯುವ ಜನರನ್ನು ಪ್ರೇರೇಪಿಸುವ ಕೆಲಸ ಮಾಡುತ್ತಿರುವ ಗಾಂಧೀ ಸ್ಮಾರಕ ನಿಧಿಯವತಿಯಿಂದ ಮಾಡುವ ಯಾವುದೇ ಕಾರ್ಯಕ್ರಮಕ್ಕೆ ಸರ್ಕಾರದ ಬೆಂಬಲವಿರುತ್ತದೆ ಎಂದು ಭರವಸೆ ನೀಡಿದರು.

ಗಾಂಧೀಜಿ ನಮ್ಮ ದೇಶಕ್ಕೆ ಮಾತ್ರ ಸೀಮಿತರಾಗಿರಲ್ಲಿಲ್ಲ. ಅವರು ಜಗತ್ತು ಕಂಡಂತಹ ಶ್ರೇಷ್ಠ ಚಿಂತಕ ಮತ್ತು ನಾಯಕರಾಗಿದ್ದರು. ಆದ್ದರಿಂದಲೇ ಅಮೇರಿಕಾದ ಅಧ್ಯಕ್ಷ ಒಬಾಮಾ ಅವರು ಗಾಂಧೀಜಿ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ನಾಯಕರೆಂದಿದ್ದಾರೆ. ಹಾಗೆಯೇ ಮಾರ್ಟಿನ್ ಲೂಥರ್ ಅವರು "ಗಾಂಧೀಜಿ ವಿಚಾರ ಜಗತ್ತಿಗೆ ಅನಿವಾರ್ಯ, ಮರೆತರೆ ವಿಶ್ವದ ನಾಶ" ಎಂದಿದ್ದಾರೆ. ಹೀಗೆ ಜಾಗತಿಕ ಮಟ್ಟದ ಗಣ್ಯರೇ ಅವರನ್ನು ಗುರುತಿಸಿರುವಾಗ ಭಾರತೀಯರಾದ ನಾವು ಗಾಂಧೀಯನ್ನು ನೆನೆಯುವುದು, ಗೌರವಿಸುವುದು ಅವರ ಸಿದ್ಧಾಂತವನ್ನು ಪಾಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಅವರ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ನಮ್ಮ ದೇಶದಲ್ಲಿ ಎಲ್ಲಾ ಕಾಲಗಟ್ಟದಲ್ಲೂ ಅಳವಡಿಸಿಕೊಳ್ಳುವಂತಹದು. ಜಾತಿ ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವಂತಹ ಘಟನೆಗಳನ್ನು ತಡೆಯಲು ಇರುವ ಪರಿಹಾರವೆಂದರೆ ಗಾಂಧೀ ಅವರ ಸತ್ಯ, ಅಹಿಂಸೆ ಹಾಗೂ ಶಾಂತಿ ಮಾರ್ಗಗಳನ್ನು ಅನುಸರಿಸುವುದು. ಒಬ್ಬ ವ್ಯಕ್ತಿಯಲ್ಲಿ ಎಲ್ಲಾ ಧರ್ಮವನ್ನು ಕಾಣಲು ಸಾಧ್ಯವಿಲ್ಲ. ಆದರೆ ಗಾಂಧೀಜಿ ಒಬ್ಬರಲ್ಲೇ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌಧ ಎಲ್ಲಾ ಧರ್ಮವನ್ನು ಕಾಣಲು ಸಾಧ್ಯವೆಂದರು.

ಗಾಂಧೀಜಿ 18 ಭಾರಿ ಕರ್ನಾಟಕಕ್ಕೆ ಆಗಮಿಸಿದ್ದು ಬೀದರ್, ರಾಯಚೂರು, ಕೊಪ್ಪಳ ಮೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿರುವುದರಿಂದಲೇ ತಮ್ಮ ರಾಜ್ಯದಲ್ಲಿ ಸಾಕಷ್ಟು ಗಾಂಧೀವಾದಿಗಳನ್ನು ನೋಡಲು ಸಾಧ್ಯವಾಯಿತು. 1937 ರಲ್ಲಿ ಅವರು ಕರ್ನಾಟಕಕ್ಕೆ ಕೊನೆ ಭೇಟಿ ನೀಡಿದರು. ನಾನು 1948 ರಲ್ಲಿ ಹುಟ್ಟಿದೆ. ಹಾಗಾಗಿ ಅವರನ್ನು ನೋಡುವ ಅವಕಾಶ ಸಿಗಲಿಲ್ಲ. ಆದರೆ ಅವರ ತತ್ವ ಸಿದ್ಧಾಂತ ಆಚಾರ, ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇನೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಗಾಂಧೀಜಿ ಅವರು ಸರ್ವೋದಯದಲ್ಲಿ ನಂಬಿಕೆ ಇಟ್ಟಿದ್ದರು. ಸಮಾಜದ ಕಟ್ಟಕಡೆಯ ಮನುಷ್ಯನ ಏಳಿಗೆಯಾಗಬೇಕು ಎಂಬ ಅವರ ಆಸೆಯಂತೆಯೇ, ನಮ್ಮ ಸರ್ಕಾರವೂ ಸರ್ವೋದಯದಲ್ಲಿ ನಂಬಿಕೆ ಇಟ್ಟು ಸಮಾಜದ ಕಟ್ಟಕಡೆಯ ಮನುಷ್ಯನು ಅಭಿವೃದ್ಧಿ ಹೊಂದಬೇಕೆಂಬ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ: ಹೆಚ್.ಎಸ್. ದೊರೆಸ್ವಾಮಿ ಅವರು ಮಾತನಾಡಿ ಗಾಂಧೀ ಅವರು ಸ್ವರಾಜ್ಯದಲ್ಲಿ ನಂಬಿಕೆ ಹೊಂದಿದ್ದರು. ಸ್ವರಾಜ್ಯವೆಂದರೆ ಬಹಳಷ್ಟು ಮಂದಿಗೆ ತಿಳಿದಿಲ್ಲ. ಸ್ವರಾಜ್ಯವೆಂದರೆ ನಿನ್ನನ್ನು ನೀನು ಆಳುವಂತಹ ಅಧಿಕಾರವನ್ನು ಪಡೆದುಕೊಳ್ಳಬೇಕು ಎಂದರ್ಥ. ತಮ್ಮನ್ನು ತಾವೇ ಹತೋಟಿಗೆ ತೆಗೆದುಕೊಳ್ಳಲು ಆಗದಿದ್ದರೆ ಸಮಾಜವನ್ನು ಹೇಗೆ ಹತೋಟಿಗೆ ತರಲು ಸಾಧ್ಯ. ಗಾಂಧೀ ಅವರ ಕನಸಾಗಿದ್ದ ಪಂಚವಾರ್ಷಿಕ ಯೋಜನೆಗಳು 12 ರಿಂದ 13 ಆಗಿದ್ದರೂ ಸಮಾಜದಲ್ಲಿ ಸಮಾನತೆ ಸಾಧ್ಯವಾಗಿಲ್ಲ. ಶ್ರೀಮಂತರು ಶ್ರೀಮಂತರಾಗಿದ್ದರೆ ಬಡವರು ಬಡವರಾಗಿ ಉಳಿದಿದ್ದಾರೆ. ಆದ್ದರಿಂದ ಬಡತನ ನಿವಾರಣೆಗಾಗಿಯೇ ಎರಡು ಪಂಚವಾರ್ಷಿಕ ಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಚಿತ್ರ ಪ್ರದರ್ಶನವನ್ನು ವಾರ್ತಾ ಸಚಿವ ಆರ್. ರೋಷನ್ ಬೇಗ್ ಉದ್ಘಾಟಿಸಿದರು. ಕರ್ನಾಟಕದಲ್ಲಿ ಗಾಂಧೀ ಹೆಜ್ಜೆಗಳು ಭೂಪಟವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಹೆಚ್. ಕೆ. ಪಾಟೀಲ್ ಅನಾವರಣ ಮಾಡಿದರು. ಕರ್ನಾಟಕದಲ್ಲಿ ಗಾಂಧೀ ವಿಶೇಷ ಪ್ರಕಟಣೆ ಹಾಗೂ ಅಂಚೆ ಲಕೋಟೆಯನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಅವರು ಬಿಡುಗಡೆ ಮಾಡಿದರು. ಗೋಪಾಲಕೃಷ್ಣ ಗೋಖಲೆ ಅವರ ಭಾವಚಿತ್ರವನ್ನು ದೆಹಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಸ್ಮಾರಕ ಮ್ಯೂಸಿಯಂನ ನಿರ್ದೇಶಕರಾದ ಅಣ್ಣಾಮಲೈ ಅನಾವರಣಗೊಳಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ: ಹೊ. ಶ್ರೀನಿವಾಸಯ್ಯ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ವಾರ್ತಾ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ

ಡಾ: ನಾಗಾಂಬಿಕಾದೇವಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ರಂಗಶಾಮಯ್ಯ, ಹಿರಿಯ ಸಾಹಿತಿ ಪಾಟೀಲ್ ಪುಟ್ಟಪ್ಪ, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ: ವೊಡೆಪು ಪಿ. ಕೃಷ್ಣ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಪೂರ್ಣಿಮ:ಜಿಪಿಆರ್:ಕೆಎಂ.

## ಉಚಿತ ತರಬೇತಿ

ಬೆಂಗಳೂರು, ಮೇ 8 (ಕರ್ನಾಟಕ ವಾರ್ತೆ)

ಮೈಸೂರು ತೋಟಗಾರಿಕಾ ಸಂಘವು ಮೇ 16 ರಂದು ಮಧ್ಯಾಹ್ನ 2-00 ಗಂಟೆಯಿಂದ 5-00 ಗಂಟೆವರೆಗೆ ಔಷಧೀಯ ಸಸ್ಯಗಳು ಅವುಗಳ ಉಪಯೋಗದ ಬಗ್ಗೆ ಒಂದು ದಿನದ ಉಚಿತ ತರಬೇತಿಯನ್ನು ಬೆಂಗಳೂರಿನ ಲಾಲ್‌ಬಾಗ್‌ನ ಎಂ.ಎಚ್. ಮರೀಗೌಡ ಮೆಮೋರಿಯಲ್ ಹಾಲ್‌ನಲ್ಲಿ ಏರ್ಪಡಿಸಿದೆ.

ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿ, ಮೈಸೂರು ತೋಟಗಾರಿಕಾ ಸಂಘ, ಲಾಲ್‌ಬಾಗ್, ಬೆಂಗಳೂರು – 4. ದೂರವಾಣಿ 26576781 ಅಥವಾ ಮೊಬೈಲ್ 9845803474/9986737142 ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್.

## ವಿದ್ಯುತ್ ಮೇಲ್ವಿಚಾರಕರ ರಹದಾರಿ ಪರೀಕ್ಷೆ

ಬೆಂಗಳೂರು, ಮೇ 8 (ಕರ್ನಾಟಕ ವಾರ್ತೆ)

"ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ನಡೆಸುವ 2014-15 ನೇ ಸಾಲಿನ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಮತ್ತು ಗಣಿ ಮತ್ತು ತಂತಿ ಕೆಲಸಗಾರರ ಗ್ರೇಡ್-2, ರಹದಾರಿ ನೀಡುವಂತಹ ಪರೀಕ್ಷೆಗಳನ್ನು ನಡೆಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಜಿಗಳನ್ನು ಜಿಲ್ಲಾ ಮಟ್ಟದ ಉಪ ವಿದ್ಯುತ್ ಪರಿವೀಕ್ಷಕರ ಕಚೇರಿಯಲ್ಲಿ ದಿನಾಂಕ: 18-05-2015 ರಿಂದ 26-05-2015 ರವರೆಗೆ ನೀಡಲಾಗುವುದು".

ಬಾಬು/ಕೆಎಂ

## Electrical Supervisor Permits Examinations

**Bangalore, May 8 (Karnataka Information)**

**"The Department of Electrical Inspectorate invites applications from eligible candidates for the ensuing exams for Electrical Supervisor General & Mines & Electrical Wiremen Grade – 2, issue of permits Examination 2014-15. The applications shall be obtained from the Deputy Electrical Inspectors the Office of concerned District from 18-05-2015 to 26-05-2015."**
**babu/km**